ತಿಳಿಸಿ ದಿನಾಂಕ: 19.10.2002 ರಂದು ಹಿಂಬರಹ ನೀಡಲಾಗಿದೆ. ಮತ್ತು ಸಂಸ್ಥೆಯವರ ಪುನರ್ ಪರಿಶೀಲನೆ ಕೋರಿರುವ ಮನವಿಯನ್ನೂ ಸಹ ಪರಿಶೀಲಿಸಿ, ದಿನಾಂಕ: 7.2.03 ರಂದು ಹಿಂಬರಹ ನೀಡಲಾಗಿದೆ.

ಬೆಳ್ತಂಗಡಿ ತಾಲ್ಲೂಕಿನ "ಮಾಲಾಡಿ" ಐಟಿಐ ಶಿಕ್ಷಣಾಲಯ ಕಟ್ಟಡ

4347(5024) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಳ್ತಂಗಡಿ ತಾಲ್ಲೂಕಿನ ಮಾಲಾಡಿಯಲ್ಲಿರುವ ಐಟಿಐ ಶಿಕ್ಷಣಾಲಯ ಪ್ರಾರಂಭಗೊಂಡು 6–7 ವರ್ಷಗಳಾಗಿದ್ದರೂ ಸ್ವಂತ ಕಟ್ಟಡ ಇಲ್ಲದಿರುವುದನ್ನು ಸರ್ಕಾರ ಗಮನಿಸಿದೆಯೆ :

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರಕಾರದ ಕ್ರಮಗಳೇನು ; ಜಮೀನು ಮತ್ತಿತರ ಅನುಕೂಲತೆಗಳಿದ್ದರೂ ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸಲು ಇರುವ ತೊಂದರೆಗಳೇನು :

ಇ) ಯಾವಾಗ ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು) :

ಅ) ಹೌದು.

ಆ) ಮುಖ್ಯ ವಾಸ್ತುಶಿಲ್ಪಿಯವರಿಂದ ನೀಲಿನಕ್ಷೆ ಮತ್ತು ಅಂದಾಜು ತಯಾರಿಸಲಾಗುತ್ತಿದೆ.

ಇ) ಆಯವ್ಯಯ ಲಭ್ಯತೆ ಅನುಸರಿಸಿ ಕ್ರಮ ಕೈಗೊಳ್ಳಲಾಗುವುದು.

ಬರಗಾಲ ಪರಿಹಾರದ ಕಾರ್ಯಗಳು

4348(4992) ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) : ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಳೆದ ಮೂರು ವರ್ಷಗಳಿಂದ ಇಂದಿನವರೆಗೆ ಬರಗಾಲ ಪರಿಹಾರ ಕಾರ್ಯಕ್ರಮ ದಡಿಯಲ್ಲಿ ರಾಜ್ಯದ ವಿವಿಧ ಕಾರ್ಯಕ್ರಮಗಳಿಗೆ ಕೇಂದ್ರ ಸರ್ಕಾರ ನೀಡಿದ ಅನುದಾನವೆಷ್ಟು ; ರಾಜ್ಯದ ಪಾಲುದಾರಿಕೆ ಎಷ್ಟು ; ನಗದು ಎಷ್ಟು ; ಆಹಾರಧಾನ್ಯದ ಪ್ರಮಾಣವೆಷ್ಟು ; (ವರ್ಷವಾರು ವಿವರ ನೀಡುವುದು) ;

ಆ) ಮೇಲ್ಕಂಡಂತೆ ನೀಡಲಾದ ಸಹಾಯವನ್ನು ಪ್ರತಿ ಜಿಲ್ಲಾವಾರು ತಾಲ್ಲೂಕುವಾರು ವಿಂಗಡಿಸಿ ನೀಡಲಾದ ವಿವರ, ಖರ್ಚು ಮಾಡಿದ ವಿವರಗಳನ್ನು ನೀಡುವುದು ?

ಶ್ರೀ ಮಲ್ಲಿಕಾರ್ಜುನ ನಾಗಪ್ಪ ಎಂ. (ಕಂದಾಯ ರಾಜ್ಯ ಸಚಿವರು) :

ಅ) ಕೇಂದ್ರ ಸರ್ಕಾರವು ಪ್ರಕೃತಿ ವಿಕೋಪ ಪರಿಹಾರ ನಿಧಿ / ಎನ್‌ಸಿಸಿಎಫ್ ನಿಂದ ಅನುದಾನ ಮತ್ತು ಬರಪೀಡಿತ ಪ್ರದೇಶಗಳಲ್ಲಿ ಉದ್ಯೋಗಸೃಜನೆಗಾಗಿ ಆಹಾರಧಾನ್ಯವನ್ನು ಈ ಕೆಳಕಂಡಂತೆ ಬಿಡುಗಡೆ ಮಾಡಿದೆ.

ವರ್ಷ	ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ		ರಾಜ್ಯ ಸರಕಾರದಿಂದ
	ಅನುದಾನ (ರೂ.ಕೋಟಿಗಳಲ್ಲಿ)	ಆಹಾರಧನ್ಯ (ಮೆ.ಟನ್‌ಗಳಲ್ಲಿ)	ಬಿಡುಗಡೆಯಾದ ಅನುದಾನ (ರೂ. ಕೋಟಿಗಳಲ್ಲಿ)
1. 2000–01	55.93	--	78.06
2. 2001–02	58.72	1,00,000	115.50